ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:973/2015

ಚಾಸಾ: 6 ಪ್ರಾಸಾ:4

ದಿನಾಂಕ: 03.08.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಚಂದ್ರ ಕುಂದರ್ |
| ತಂದೆಯ ಹೆಸರು | : | ನಾರಾಯಣ ಮರಕಲಾ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಮೀನುಗಾರಿಕೆ |
| ವಾಸ ಸ್ಥಳ | : | ಮಣೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿಲ್ಲ. ಸಾಕ್ಷಿಗೆ ದಿ: 17-09-2014ರ ಸ್ವತ್ತು ಸ್ವಾಧೀನತಾ ಮಹಜರು ಹಾಗೂ ಆರೋಪಿತರ 2 ದಸ್ತಗಿರಿಯ ಮಹಜರುಗಳನ್ನು ತೋರಿಸಿದ್ದು,ಅದರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ನಿಪಿ-6 ರಿಂದ 8 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-6(ಎ) ರಿಂದ ನಿಪಿ-8(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಪೊಲೀಸರು ಪ್ರಾಸಾ-1ರವರಿಗೆ ಚಿನ್ನವನ್ನು ಬಿಡುಗಡೆ ಮಾಡುವ ಕಾಲಕ್ಕೆ ಮಾಡಿರುತ್ತೇನೆ. ಸಾಕ್ಷಿಗೆ 2 ಪೋಟೋಗಳನ್ನು ತೋರಿಸಿದ್ದು ಅವುಗಳಲ್ಲಿ ತನ್ನನ್ನು ನೋಡಿ ಗುರುತಿಸಿದ ಮೇರೆಗೆ ಪೋಟೋಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಈ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ಸಾಕ್ಷಿಗೆ ದಿಃ 17-09-2014 ರ ಹೇಳಿಕೆಯನ್ನು ಓದಿ ತಿಳಿಸಿದ್ದು, ಅದನ್ನು ಒಪ್ಪಿರುವುದಿಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಸದ್ರಿ ಸ್ಥಳದಲ್ಲಿ ನಿಪಿ-9 ಮತ್ತು 10ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-9ರಲ್ಲಿ ಕಾಣುವ ಪೋಟೋದಲ್ಲಿರುವ ಗಾಡಿಯನ್ನು ನನ್ನ ಸಮಕ್ಷಮ ವಶಕ್ಕೆ ಪಡೆದರು ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯನ್ನು ದಸ್ತಗಿರಿ ಮಾಡುವ ಕಾಲಕ್ಕೆ ನಾನು ಅಲ್ಲೇ ಹಾಜರು ಇದ್ದೆ ಎಂದರೆ ಸರಿ. ಸದ್ರಿ ಕ್ರಮವನ್ನು 11 ರಿಂದ 11-45ರವರೆಗೆ ಜರುಗಿಸಿದ್ದರು ಎಂದರೆ ಸರಿ. ನಿಪಿ-11ರಲ್ಲಿ ಬರೆದಿರುವ ಕ್ರಮಗಳು ನನ್ನ ಸಮಕ್ಷಮ ಜರುಗಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಜೆ ಜಿ ಎನ್ ರವರಿಂದಃ</u>**

ಪ್ರಾಸಾ-1 ರವರಿಗೆ ಸೇರಿದ ಚಿನ್ನವಾಗಿರುತ್ತದೆ. ಅದು ಪೊಲೀಸರು ಹೇಳಿದ ಮೇರೆಗೆ ನನಗೆ ತಿಳಿಯಿತು ಎಂದರೆ ಸರಿ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**